ಶೋಷಣೆಯಾಗುತ್ತದೆ. ನನಗೆ ತಿಳಿದ ಮಟ್ಟಿಗೆ ಒಂದೊಂದು ಸ್ಕೂಲಿನಲ್ಲಿಯೂ ಒಂದೊಂದು ಕಮಿಟಿಯನ್ನು ಮಾಡಿ ಅದರಲ್ಲಿ ತಂದೆ ತಾಯಿಗಳ ಪ್ರತಿನಿಧಿಗಳು ವಿದ್ಯಾ ಇಲಾಖೆಯ ಪ್ರತಿನಿಧಿಗಳು, ಮತ್ತು ಆ ಏರಿಯಾಕ್ಕೆ ಸಂಬಂಧಪಟ್ಟ ಎಂ ಎಲ್ ಎ ಅಥವಾ ಕಾರ್ಪೊರೇಟರ್ಸ್‌ಗಳನ್ನು, ಸರ್ಕಾರದವರು ೨ ಅಥವಾ ೩ ಜನ ಪ್ರತಿನಿಧಿಗಳನ್ನು ಸೇರಿಸಿಕೊಂಡರೆ ಎಲ್ಲಾ ರೀತಿಯಿಂದಲೂ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

†ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).—ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಸದಸ್ಯರಾದ ಶಾಮಣ್ಣನವರು ಬಿಟ್ಟಿರತಕ್ಕ ವಿಚಾರಗಳನ್ನು ಮಾತ್ರ ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ನಾವುಗಳು ಕಳೆದ ವರ್ಷ ಮಾನ್ಯಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಒಂದು ಮೆಮೊರಾಂಡಮ್ಮನ್ನು ಕೊಟ್ಟಿದ್ದೆವು, ಅದರ ಬಗ್ಗೆ ಯಾವ ಒಂದು ಕ್ರಮವನ್ನೂ ಅವರು ತೆಗೆದುಕೊಂಡಂತೆ ಕಾಣಲಿಲ್ಲ. ಬೆಂಗಳೂರಿನ ಶಾಸಕರು, ಮತ್ತು ಪೋಷಕರು ಅಡ್ಮಿಷನ್ ಕಾಲದಲ್ಲಿ ನರಕಯಾತನೆಯನ್ನು ಅನುಭವಿಸುತ್ತಿದ್ದಾರೆ. ಖಾಸಗೀ ಶಾಲೆಗಳವರು . ಅದರಲ್ಲಿಯೂ ಕ್ಲೂನಿ ಕಾನ್‌ವೆಂಟ್ಸ್, ಸೆಂಟ್ಸ್ಲಾ ಮೆರೀಸ್ ಇಂಥ ಕಾನ್‌ವೆಂಟುಗಳಲ್ಲಿ ಯಾರ ಮಾತನ್ನೂ ಸಹ ಕೇಳುವುದಿಲ್ಲ, ಅವರು ಯಾರಿಗೂ ಕೇರ್ ಮಾಡುವುದಿಲ್ಲ. ಮಂತ್ರಿಗಳ ಮಾತಿಗಂತೂ ಅಲ್ಲಿ ಮೂರು ಕಾಸಿನ ಬೆಲೆಯೂ ಇಲ್ಲ. ಮಂತ್ರಿ ಪದವಿಯನ್ನು ಬೇಕಾದರೆ ತೆಗೆದುಕೊಳ್ಳಬಹುದು, ಆದರೆ ಈ ಸ್ಕೂಲುಗಳಲ್ಲಿ ಸೀಟು ತೆಗೆದುಕೊಳ್ಳುವುದು ಅಷ್ಟು ಕಷ್ಟವಾಗಿರುತ್ತದೆ. ಸರ್ಕಾರದವರು ಈ ಬಗ್ಗೆ ತೀವ್ರವಾಗಿ ಆಸಕ್ತಿ ವಹಿಸಿ ಒಂದು ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ಮಾನ್ಯ ಶಾಮಣ್ಣನವರು ಕೊಟ್ಟಿರುವ ಸಲಹೆ, ಒಂದು ಕಮಿಟಿಯನ್ನು, ಮಾಡಿ ಅದರಲ್ಲಿ ಶಾಸಕರನ್ನು ಕಾರ್ಪೊರೇಟರನ್ನು ಪ್ರತಿನಿಧಿಯಾಗಿಡುವುದು, ಒಳ್ಳೆಯ ಸಲಹೆ, ಅದನ್ನು ಸರ್ಕಾರದವರು ಅಂಗೀಕಾರ ಮಾಡಬಹುದು. ಎರಡನೆಯದಾಗಿ, ಖಾಸಗಿ ಸ್ಕೂಲುಗಳವರು ಕೆಲವರು ಸರ್ಕಾರದಿಂದ ನಮಗೆ ಗ್ರಾಂಟ್ ಬೇಕಾಗಿಲ್ಲ, ಗ್ರಾಂಟ್ ಕೊಡುತ್ತಿಲ್ಲವೆಂದು ತಮಗೆ ಬೇಕಾದಂಥ ನೀತಿಯನ್ನು ಅನುಸರಿಸಬಹುದು. ಆದರೆ ಸರ್ಕಾರದವರು ಇಂಥ ಸ್ಕೂಲುಗಳಿಗೆ ಗ್ರಾಂಟನ್ನು ಕೊಡುವಾಗ ಕೆಲವು ಕಂಡೀಷನ್ಸ್‌ನ್ನು ಹಾಕಬೇಕು. ಶಾಲೆಗಳವರು ಅಕ್ಕಪಕ್ಕದಲ್ಲಿರತಕ್ಕ ಹುಡುಗರಿಗೆ ಮೊದಲು ಸೀಟು ಕೊಟ್ಟು ನಂತರ ಬೇರೆಯವರಿಗೆ ಕೊಡಬೇಕು ಎನ್ನುವ ಕಂಡೀಷನ್ಸ್ ಸರ್ಕಾರದವರು ಹಾಕಿದರೆ, ಪರಿಸ್ಥಿತಿ ಒಂದು ರೀತಿಯಲ್ಲಿ ಹತೋಟಿಗೆ ಬರುವುದಕ್ಕೆ ಸಾಧ್ಯವಾಗುತ್ತದೆ. ಇದರ ಜೊತೆಗೆ ಇಂಥ ಸ್ಕೂಲುಗಳಲ್ಲಿ ಉಪಾಧ್ಯಾಯರುಗಳು ಕೂಲಿಯವರಂತೆ ಕೆಲಸ ಮಾಡಬೇಕಾಗಿದೆ, ಸರಿಯಾಗಿ ಅವರಿಗೆ ಸಂಬಳ ಕೊಡುವುದಿಲ್ಲ, ರಜದಲ್ಲಿ ಕೆಲಸದಿಂದ ತೆಗೆದುಹಾಕುತ್ತಾರೆ, ಮತ್ತು ಪೋಷಕರಿಂದ ಬೇಕಾದಷ್ಟು ಹಣವನ್ನು ವಸೂಲು ಮಾಡುತ್ತಾರೆ. ತಿಂಗಳೊಂದಕ್ಕೆ ೩೦ ರಿಂದ ೫೦ ರೂಪಾಯಿಗಳ ಫೀಜನ್ನು ವಸೂಲು ಮಾಡಿಕೊಂಡು ಉಪಾಧ್ಯಾಯರಿಗೆ ಸರಿಯಾಗಿ ಸಂಬಳ ಕೊಡದೆ ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿಸಿಕೊಂಡು ಈ ಸಂಸ್ಥೆಗಳನ್ನು ವ್ಯಾಪಾರಿ ಸಂಸ್ಥೆಗಳನ್ನಾಗಿ ಮಾಡಿಕೊಂಡಿರುವವರು ಬಹಳ ಜನ ಇದ್ದಾರೆ. ಇಂಥ ಎಡ್ರಿಂಗ್ ಸ್ಕೂಲುಗಳವರಿಗೆ ಸರ್ಕಾರದವರು ರೆಕಗ್ನಿಷನ್ ಕೊಡುವಾಗ ಕಂಡೀಷನ್ಸ್‌ಹಾಕ ಕೊಡಬೇಕು, ಮತ್ತು ಹರಿಜನ ಗಿರಿಜನರಿಗೂ ಪ್ರಾತಿನಿಧ್ಯ ಕೊಡುವ ರೀತಿಯಲ್ಲಿ ಮಾಡಬೇಕು. ತಾವು ಬೇಕಾದರೆ ಖಾಸಗಿ ಶಾಲೆಗಳಿಂದ ಅಂಕಿಅಂಶಗಳನ್ನು ತರಿಸಿ ನೋಡಿದಲ್ಲಿ ಅದರಲ್ಲಿ ಎಷ್ಟು ಹರಿಜನರು ಇದ್ದಾರೆನ್ನುವುದು ಗೊತ್ತಾಗುತ್ತದೆ. ಇಂಥವರಿಗೂ ಶಾಲಾಕಾಲೇಜುಗಳಲ್ಲಿ ಅವಕಾಶವನ್ನು ಕಲ್ಪಿಸಲು ಏನಾದರೂ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು ಎಂದು ನಾನು ಹೇಳುತ್ತೇನೆ.

Matters under rule 312

(ii) re : Admission of childrens in private schools and colleges in Bangalore City

†ಶ್ರೀ ಮಳ್ಳೂರು ಆನಂದರಾವ್ (ರಾಜಾಜಿನಗರ).—ಅಧ್ಯಕ್ಷರೆ, ಈಗ ಹೊರಗಡೆ ಏನು ಪರಿಸ್ಥಿತಿ ನಿರ್ಮಾಣವಾಗಿದೆ ಅದನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ ಈಗ ನರ್ಸರಿ ಶಾಲೆಗಳು ಮತ್ತು ಪ್ರೈಮರಿ ಶಾಲೆಗಳ ಬಾಗಿಲು ತೆಗೆದಿವೆ. ನಂತರ ಕಾಲೇಜುಗಳು ಮತ್ತು ಹೈಸ್ಕೂಲು ಇನ್ನು ಸ್ವಲ್ಪ ದಿವಸಗಳಲ್ಲಿ ತೆರೆಯಲ್ಪಡುತ್ತವೆ. ಶಾಲೆಗಳಿಗೆ ಮಕ್ಕಳನ್ನು ಸೇರಿಸುವುದಕ್ಕೆ ತಂದೆತಾಯಿಗಳು ಏನು

ಒವಣಿಯನ್ನು ಅನುಭವಿಸುತ್ತಿದ್ದಾರೆ ಎಂಬುದನ್ನು ಹೋಗಿ ನೋಡಿದರೆ ಅದನ್ನು ಯಾವ ರೀತಿ ವರ್ಣನೆ ಮಾಡಬೇಕೋ ಗೊತ್ತಿಲ್ಲ. ಯಾವ ಶಾಲಾ ಕಾಲೇಜುಗಳಲ್ಲಿ ನೋಡಲಿ ೬ ತಿಂಗಳುಗಳ ಮುಂಚೆ ರಿಸರ್ ವೇಷನ್ ಮಾಡಿರುತ್ತಾರೆ. ಆದೇನು ರಿಸರ್ವೇಷನ್ ಮಾಡುತ್ತಾರೋ ಗೊತ್ತಿಲ್ಲ. ನರ್ಸರಿ ಸ್ಕೂಲುಗಳಲ್ಲಿ, ಲೋಯರ್ ಕೇಜಿ, ಅಪ್ಪರ್ ಕೇಜಿಗೆ ಸೀಟುಗಳು ಸಿಕ್ಕುವುದು ಬಹಳ ಕಷ್ಟವಾಗಿದೆ. ಏಳನೇ ತರಗತಿಯಲ್ಲಿ ಮೊದಲ ದರ್ಜೆಯಲ್ಲಿ ಉತ್ತೀರ್ಣನಾಗಿ ೭೦-೮೦ ಪರ್ಸೆಂಟ್ ಅಂಕಗಳನ್ನು ತೆಗೆದುಕೊಂಡಿದ್ದರೂ ಹೈಸ್ಕೂಲಿಗೆ ಸೀಟು ಸಿಕ್ಕುವುದಿಲ್ಲ. ತಂದೆತಾಯಿಗಳು ಏನು ಮಾಡಬೇಕು ? ಬೆಳಗಾದ ಕೂಡಲೆ ಶಾಸಕರಾದ ನಮ್ಮನ್ನು ಆ ವಿದ್ಯಾರ್ಥಿಗಳ ತಂದೆತಾಯಿಗಳು ನಮ್ಮಲ್ಲಿ ಬಂದು ಪ್ರಶ್ನೆ ಮಾಡುತ್ತಾರೆ. ನಮ್ಮ ಹುಡುಗ ನಮ್ಮ ಹುಡಿಗಿ ಪಾಸಾಗಿದ್ದಾರೆ, ಶಾಲೆಗಳಲ್ಲಿ ಸೀಟು ಸಿಕ್ಕುತ್ತಿಲ್ಲ ಎಂದು ಹೇಳುತ್ತಾರೆ. ಆ ಸಮಯದಲ್ಲಿ ನಾವು ಮೂಕರಾಗಿ ಏನೂ ಹೇಳುವುದಕ್ಕಾಗುವುದಿಲ್ಲ. ಈಗ ನಾವು ಖಾಸಗಿ ಶಾಲೆಗಳಿಗೆ ಚೀಟಿ ಕಳಿಸಿದರೆ ಶಾಲೆಯು ಭರ್ತಿಯಾಗಿದೆ, ಜಾಗ ಇಲ್ಲ ಎಂದು ಹೇಳುತ್ತಾರೆ. ಈ ಸಮಸ್ಯೆಯನ್ನು ಶಿಕ್ಷಣ ಇಲಾಖೆಯವರು ಯಾವ ರೀತಿ ಎದುರಿಸುತ್ತಾರೆ? ಪ್ರಾಥಮಿಕ ಮತ್ತು ಸೆಕೆಂಡರಿ ವಿದ್ಯಾಭ್ಯಾಸವನ್ನು ಖಡ್ಡಾಯವಾಗಿ ಕೊಡತಕ್ಕ ಜವಾಬ್ದಾರಿಯನ್ನು ಹೊತ್ತಿಕೊಂಡಿರುವಾಗ ಅವರು ಅದನ್ನು ಸರಿಯಾಗಿ ನಿರ್ವಹಿಸಬೇಕು. ಆದರೆ ಸರ್ಕಾರದವರು ತಮ್ಮ ಹೆಗಲ ಮೇಲೆ ಇರತಕ್ಕಂತಹ ಜವಾಬ್ದಾರಿಯನ್ನು ನಿರ್ವಹಿಸುವುದರಲ್ಲಿ ವಿಫಲರಾಗಿದ್ದಾರೆ. ಹೀಗಿರುವಾಗ ತಂದೆ ತಾಯಿಗಳು ಅವರ ಮಕ್ಕಳಿಗೆ ಯಾವ ರೀತಿ ಶಾಲೆಗಳಲ್ಲಿ ಸ್ಥಳ ಗಳನ್ನು ಪಡೆದು ಮಕ್ಕಳಿಗೆ ವಿದ್ಯಾಭ್ಯಾಸವನ್ನು ಒದಗಿಸಬೇಕು ? ಮೇ ತಿಂಗಳಲ್ಲಿ ಶಾಲಾ ಕಾಲೇಜುಗಳು ಪ್ರಾರಂಭವಾಗುತ್ತವೆ. ಅವು ಪ್ರಾರಂಭವಾಗುವುದಕ್ಕೆ ಮುಂಚೆ ಎಷ್ಟು ಜನ ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಿಗೆ ಬರುತ್ತಾರೆ? ಅವರಿಗೆ ಯಾವ ರೀತಿ ಸೀಟುಗಳನ್ನು ಒದಗಿಸಬೇಕು ಎನ್ನುವ ಬಗ್ಗೆ ಶಿಕ್ಷಣ ಇಲಾಖೆ ವಿಫಲವಾಗಿದೆ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಸೂಕ್ತ ಪರಿಹಾರವನ್ನು ಒದಗಿಸಬೇಕು. ಇಲ್ಲದಿದ್ದರೆ ಹಾಹಾಕಾರ ಉಂಟಾಗುತ್ತದೆ. ಬಹುತೇಕ ನಗರ ಪ್ರದೇಶಗಳಲ್ಲಿ ಎಷ್ಟು ಮಕ್ಕಳು ಹೊರಗೆ ಬರುತ್ತಾರೆ ಎಷ್ಟು ಶಾಲೆಗಳು ಇವೆ, ಇನ್‌ಟೇಕ್ ಕೆಪಾಸಿಟಿ ಎಷ್ಟು ಎನ್ನುವ ಬಗ್ಗೆ ಶಿಕ್ಷಣ ಅಧಿಕಾರಿಗಳು ಅಸೆಸ್ ಮಾಡಿದ್ದಾರೆಯೆ? ಆ ರೀತಿ ವ್ಯವಸ್ಥೆಯನ್ನು ಸರ್ಕಾರದವರು ಮಾಡದೇ ಇರುವುದರಿಂದ ಪ್ರತಿ ವರ್ಷ ಗಡಿಬಿಡಿಯಾಗಿ ಅದರ ದುರ್ಲಾಭವನ್ನು ಖಾಸಗಿ ಶಾಲೆಗಳ ಮಾಲೀಕರು ಪಡೆದುಕೊಳ್ಳುತ್ತಿದ್ದಾರೆ. ಇವತ್ತು ಖಾಸಗಿ ಶಾಲೆಗಳಿಗೆ, ನರ್ಸರಿ ಶಾಲೆಗಳಿಗೆ ಸೀಟು ಸಿಕ್ಕಬೇಕಾದರೆ ೪೦೦ ರೂಪಾಯಿ ೫೦೦ ರೂಪಾಯಿ ಡೊನೇಷನ್ ಕೊಡಬೇಕು. ಈ ಹಣ ಎಲ್ಲಿಗೆ ಹೋಗುತ್ತದೆ ? ಯಾರಿಗೆ ಹೋಗುತ್ತದೆ ? ಇವತ್ತು ಬೆಂಗಳೂರು ಸಿಟಿ ಡಬಲ್ ರೋಡಿನಲ್ಲಿ ಒಂದು ಆಕ್ಸ್‌ಫರ್ಡ್ ಸ್ಕೂಲು ಎಂದು ಇದೆ. ಅಲ್ಲಿ ಎಷ್ಟು ಜನ ಮಕ್ಕಳನ್ನು ಸೇರಿಸಿ ಕೊಳ್ಳುತ್ತಾರೋ ಗೊತ್ತಿಲ್ಲ. ಒಂದು ಸೀಟಿಗೆ ೪೦೦; ೫೦೦ ರೂಪಾಯಿ ಗಳನ್ನು ತೆಗೆದುಕೊಳ್ಳುತ್ತಾರೆ. ನರ್ಸರಿ ಶಾಲೆಗೆ ಮಕ್ಕಳನ್ನು ಸೇರಿಸಲು ಒಂದು ಸೀಟಿಗೆ ಇಷ್ಟು ಹಣ ಕೊಡಬೇಕೆಂದರೆ ಎಲ್ಲಿಂದ ಹಣವನ್ನು ತರಬೇಕು ? ಒಂದೊಂದು ಸಾರಿ ಡೊನೇಷನ್ ಕೊಡುತ್ತೇವೆಂದರೂ ಸೀಟ್ ಇಲ್ಲ ಎಂದು ಆ ಶಾಲೆಯ ಮಾಲೀಕರು ಹೇಳುತ್ತಾರೆ. ಆದೇನು ಅವರು ಆರ್ಟಿಫಿಶಿಯಲ್ ಸ್ಕೇರ್‌ಸಿಟಿಯನ್ನು ನಿರ್ಮಾಣ ಮಾಡುತ್ತಿದ್ದಾರೋ ಏನೋ. ಈ ರೀತಿ ಖಾಸಗಿ ಶಿಕ್ಷಣ ಶಾಲೆಗಳು ವ್ಯಾಪಾರ ಮಾಡಿಕೊಂಡು ಹೋಗುತ್ತಿದ್ದಾರೆ. ತಂದೆತಾಯಿಗಳು ಸಂಕಷ್ಟಕ್ಕೆ ಸಿಕ್ಕಿಹಾಕಿಕೊಂಡಿದ್ದಾರೆ. ಮಕ್ಕಳಿಗೆ ಶಾಲಾ ಕಾಲೇಜುಗಳ ಸೀಟುಗಳನ್ನು ಒದಗಿಸುವ ಬಗ್ಗೆ ಶಿಕ್ಷಣ ಇಲಾಖೆ ವಿಫಲವಾಗಿದೆ. ಮಾನ್ಯ ಮಂತ್ರಿಗಳು ಏನು ಉತ್ತರ ಕೊಡುತ್ತಾರೆಂದು ನನಗೆ ಗೊತ್ತಿದೆ. ಕಾರ್ಪೊರೇಷನ್ ಹಾಗೂ ಸರ್ಕಾರಿ ಶಾಲೆಗಳು ಇವೆ ಅಲ್ಲಿಗೆ ಸೇರಿಸಿ ಎಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ಆದರೆ ತಂದೆ ತಾಯಿಗಳು ಆ ಶಾಲೆಗಳಿಗೆ ಮಕ್ಕಳನ್ನು ಸೇರಿಸಲು ಇಷ್ಟಪಡುವುದಿಲ್ಲ. ಎಷ್ಟೇ ಕಷ್ಟ ಪಟ್ಟರೂ ಕೂಡ ತಮ್ಮ ಮನೆಯಲ್ಲಿರತಕ್ಕ ಪಾತ್ರೆ ಪಡಗಗಳನ್ನು ಮಾರಿ ಖಾಸಗಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸುವು ದಕ್ಕೆ ಪ್ರಯತ್ನಪಡುತ್ತಾರೆ. ಈ ಬಗ್ಗೆ ತಮ್ಮ ಇಲಾಖೆಯ ಅಧಿಕಾರಿಗಳನ್ನು ಸ್ವಲ್ಪ ಟೋನಪ್ ಮಾಡ ಬೇಕೆಂದು ನಾನು ಬಡ್ಜೆಟ್ ಮೇಲೆ ಮಾತನಾಡುವಾಗ ಹೇಳಿದ್ದೇನೆ. ಬರುವ ವರ್ಷ ಎಷ್ಟು ಮಕ್ಕಳು ಹೊರಗೆ ಬರುತ್ತಾರೆ, ಸರ್ಕಾರಿ ಶಾಲೆಗಳಲ್ಲಿ ಎಷ್ಟು ಸೀಟುಗಳಿವೆ. ಕಾರ್ಪೊರೇಷನ್ ಶಾಲೆಗಳಲ್ಲಿ ಎಷ್ಟು ಸೀಟುಗಳಿವೆ ಎನ್ನುವುದನ್ನು ನೋಡಿ ಮಕ್ಕಳಿಗೆ ಸೀಟುಗಳನ್ನು ಒದಗಿಸಿಕೊಡತಕ್ಕದ್ದು ಸರ್ಕಾರದ ಜವಾ ಬ್ದಾರಿಯಲ್ಲವೆ ? ಸೀಟು ಸಿಕ್ಕುವುದಿಲ್ಲವೆಂದರೆ ನೀವು ಏನು ಪರಿಹಾರ ಮಾಡಿದ್ದೀರಿ. ಡೊನೇಷನ್ ಕೊಡು ವುದನ್ನು ನಿಲ್ಲಿಸುವುದಕ್ಕೆ ಏನಾದರೂ ಪ್ರಯತ್ನ ಮಾಡಿದ್ದೀರಾ? ಒಂದೊಂದು ಶಾಲೆಗಳಲ್ಲಿ ಎಷ್ಟೆಷ್ಟು ಸೀಟುಗಳು ಇವೆ ಎಂಬುದನ್ನು ಅಸೆಸ್ ಮಾಡಿ ಈ ವರ್ಷದಲ್ಲಿ ಯಾರು ಸೀಟ್ ಕೇಳುವುದಕ್ಕೆ ಬರುತ್ತಾರೋ ಅವರೆಲ್ಲರಿಗೂ ಸೀಟು ದೊರಕಿಸುವುದಕ್ಕೆ ಪ್ರಯತ್ನ ಮಾಡಬೇಕು. ಇನ್ನು ಒಂದು ವಾರದಲ್ಲಿ ಶಾಲಾ

ಕಾಲೇಜುಗಳಲ್ಲಿ ಸೀಟುಗಳು ಬೇಕೆಂದು ಯಾರು ಬರುತ್ತಾರೆ ಅವರೆಲ್ಲರಿಗೂ ಕೂಡ ಸೀಟುಗಳನ್ನು ಒದಗಿಸಿ ಅವರ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

†SRI C. M. ARUMUGHAM (K. G. F.). –Sir, last year we have made several complaints on the working of the Private Institutions in Karnataka, particulary in Bangalore city. Sir, every year we are spending nearly Rs. 150 crores towards education. But the people of our Karnataka are not getting proper education from our educational institutions. There are so many schools run by the private managements These managements are having nearly half a dozen schools under different names of their family members. When A. E. O or D. I. P. goes for inspection the management will shift some of the students to other schools which were run by the same management at different places. This is a regular affair in Bangalore. I would like to know from the Government what action the Education Department has taken in this behalf to rectify these defects. Are the Government is incompetent to take action because they are not giving grants to these private institutions? Therefore, I appeal to the Government to take steps as it deems fit to control these private managements. Because as has been mentioned by the hon. Members these private institutions are minting money like anything from the parents. The President of these institutions and other Members travel in cars and have posh buildings in Bangalore City. It has become a sort of business to run the schools by an individual. I know the Education Department is a big organization. But, the Department should set right some of these important things to help the parents and as well the students community. As we all know previously there were somany Ministers who have handled this Department. But they have not made any reforms. They have allowed all these things and now it has become a problem to the society. I would like to know from the Hon. Minister for Education what reforms your Department has done in the matter of giving education to the students. If there are any lapses you should set right and see that they function smoothly. You say that Kannada should become the State language. How many officers are sending children to the Corporation schools and how many of them are sending their children to the Sophia Convent. For that matter, how many Ministers and politicians are sending their children to the Corporation schools? Even one of them wants to send his children to private schools, to the Sophia Convent. If you are near that convent at 9 O'Clock you can see a procession of cars there. This is not conducive to a socialistic society. You cannot have two kinds of citizens, one sending their children to private schools and another sending his children to Corporation schools. When private schools can attract so many people, is it not

So, the ultimate remedy is that certain control has to be exercised on these educational institutions including those mentioned by the hon. Member Sri Arumugham, and for that a statute is being got ready.

ಶ್ರೀ ಮಳ್ಳೂರು ಆನಂದರಾವ್.—ಈಗ ಮಕ್ಕಳಿಗೆ ಶಾಲೆಯಲ್ಲಿ ಅಡ್ಮಿಷನ್ ಸಿಕ್ಕುತ್ತಾ ಇಲ್ಲ. ಅದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ಕೇಳುತ್ತಾ ಇದ್ದೇನೆ. ಮಕ್ಕಳಿಗೆ ಅಡ್ಮಿಷನ್ ಸಿಕ್ಕುತ್ತಾ ಇಲ್ಲ ಎಂದು ತಂದೆತಾಯಿಗಳು ತೊಂದರೆಪಡುತ್ತಿದ್ದಾರೆ. ಅದರ ಬಗ್ಗೆ ಏನು ಕ್ರಮ ತೆಗೆದು ಕೊಳ್ಳುತ್ತೀರಿ ಎಂದು ಕೇಳುತ್ತಿದ್ದೇನೆ. ಬೇರೆ ವಿಚಾರ ಹೇಳಿದರೆ ಏನು ಪ್ರಯೋಜನ ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಅದನ್ನೇ ನಾನೂ ಕೂಡ ಹೇಳಿದ್ದು.

ಶ್ರೀ ಟಿ. ಆರ್. ಶಾಮಣ್ಣ.—ಎಜುಕೇಷನ್ ಬಿಲ್ ಪಾಸಾಗಿ ಜಾರಿಗೆ ಬರುವವರೆಗೂ ಏನು ರಿಲೀಫ್ ಕೊಡುತ್ತೀರಿ ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಮಾನ್ಯ ಸದಸ್ಯರು ಮೂಲ ಪ್ರಶ್ನೆಯನ್ನು ಎತ್ತಿದರು. ಇಷ್ಟನ್ನೇ ಕೇಳಿದ್ದರೆ ನಾನು ಅದನ್ನೆಲ್ಲಾ ಹೇಳುತ್ತಾ ಇರಲಿಲ್ಲ. ಇದನ್ನು ಎತ್ತುವ ಬದಲು ಬಾಕೀ ಪ್ರಶ್ನೆಯನ್ನು ಎತ್ತಿದ್ದರಿಂದ ನಾನು ಹೇಳಬೇಕಾಗಿ ಬಂತು. ಇದಕ್ಕೆ ಈಗಾಗಲೇ ನಾನು ಹೇಳಿದ್ದೇನೆ. ಏನೆಂದರೆ, ಕೆಲವೇ ಇನ್‌ಸ್ಟಿಟ್ಯೂಷನ್‌ಗಳಲ್ಲಿ ತಮ್ಮ ಮಕ್ಕಳನ್ನು ಹೆಚ್ಚಾಗಿ ಸೇರಿಸಬೇಕೆಂದು ಪೇರೆಂಟ್ಸ್ ಹೋಗು ವುದರಿಂದ ಈ ಒಂದು ಕಷ್ಟ ಕೆಲವು ಇನ್‌ಸ್ಟಿಟ್ಯೂಷನ್‌ಗಳಲ್ಲಿ ಬಂದಿದೆ. ಆದರೆ ಬಾಕೀ ಇನ್‌ಸ್ಟಿಟ್ಯೂಷನ್ ಗಳಲ್ಲಿ ಅಂದರೆ ಗವರ್ನಮೆಂಟ್ ಶಾಲೆಗಳಲ್ಲಿ, ಕಾರ್ಪೊರೇಷನ್ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಸೀಟ್ ಸಿಕ್ಕುವ ಹಾಗೆ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳುತ್ತದೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

(iii) *re: Expansion of Existing Southern Railway Workshop at Mysore City.*

† SRI H. GANGADHARAN (Krishnaraja).—Sir I raise a matter under rule 312 regarding seeking financial assistance from the Government of India for expansion of the existing Southern Railway Workshop at Mysore City. ಮೈಸೂರಿನಲ್ಲಿ ಸುಮಾರು ೫೦ ವರ್ಷಗಳ ಹಿಂದೆ ಶ್ರೀಮಾನ್ ಕೃಷ್ಣರಾಜ ಒಡೆಯರ ಕಾಲದಲ್ಲಿ ಈ ವರ್ಕ್‌ಷಾಪ್ ಸ್ಥಾಪನೆಯಾಗಿದೆ. ಆದರಲ್ಲಿ ೩೦೦೦ ಜನ ಕೆಲಸ ಮಾಡು ತ್ತಿದ್ದರು ಅದು ಮೈಸೂರು ನಗರದ ೩೦೦೦ ಜನರಿಗೆ ನೌಕರಿ ಒದಗಿಸುತ್ತಿತ್ತು. ೧೯೫೦ರಲ್ಲಿ ಇಂಟಗ್ರೇ ಷನ್ ಆಫ್ ರೈಲ್ವೇಸ್ ಮಾಡತಕ್ಕಂಥ ಕಾಲದಲ್ಲಿ ಆಂಧ್ರ, ಕೇರಳ ಮತ್ತು ತಮಿಳುನಾಡುಗಳಿಂದ ಬೇರೆ ಬೇರೆ ಅಧಿಕಾರಿಗಳು ಬರುವುದಕ್ಕೆ ಪ್ರಾರಂಭವಾದ ಮೇಲೆ ಈ ವರ್ಕ್‌ಷಾಪಿನ ಮಹತ್ವ ಕಡಿಮೆಯಾಗಿ ಒಂದೂವರೆ ಸಾವಿರ ಜನ ಮಾತ್ರ ಕೆಲಸ ಮಾಡುತ್ತಿದ್ದರು. ಈ ಸಂದರ್ಭದಲ್ಲಿ ಏನಾಗಿದೆಯೆಂದರೆ, ಬೆಂಗಳೂರಿಂದ ಮೈಸೂರಿಗೆ ಬ್ರಾಡ್‌ಗೇಜ್ ಆಗುವುದರಿಂದ ವರ್ಕ್‌ಷಾಪ್ ಮಹತ್ವ ಇನ್ನೂ ಕಡಿಮೆ ಯಾಗತಕ್ಕ ಪರಿಸ್ಥಿತಿಯನ್ನು ನಾವು ಕಾಣುತ್ತಾ ಇದ್ದೇವೆ. ಒಂದೂವರೆ ಸಾವಿರ ಜನ ಕೆಲಸಮಾಡು ತ್ತಿದ್ದಾರೆ. ಬೇರೆಯವರನ್ನು ಕೆಲಸಕ್ಕೆ ಸೇರಿಸಿಕೊಂಡಿಲ್ಲ. ಅಲ್ಲಿ ಇದುವರೆಗೆ ಮೀಟರ್‌ಗೇಜ್ ಕೋಚು ಗಳನ್ನು ತಯಾರು ಮಾಡುತ್ತಿದ್ದರು, ರಿಪೇರಿ ಕೆಲಸ ಮಾಡುತ್ತಿದ್ದರು. ೧೯೭೧ನೇ ಇಸವಿಯಲ್ಲಿ ಶ್ರೀಮಾನ್ ಹನುಮಂತಯ್ಯನವರು ರೈಲ್ವೆ ಮಂತ್ರಿಗಳಾಗಿದ್ದಾಗ ಎಕ್ಸ್‌ಪಾನ್‌ಷನ್‌ಗೆ ಒಂದು ಯೋಜನೆ ತಯಾರು ಮಾಡಿ ಅದು ಸರ್ಕಾರದ ಮಂಜೂರಾತಿ ಪಡೆದಿತ್ತು. ಆದರೆ ಅದು ಫಲಕಾರಿಯಾಗಲಿಲ್ಲ. ಕೇಂದ್ರ ಸರ್ಕಾರ ಸುಮಾರು ೭೦ ಕೋಟಿ ರೂಪಾಯಿಗಳ ವೆಚ್ಚದೊಳಗೆ ಬ್ರಾಡ್‌ಗೇಜ್ ರೈಲ್ವೆ ವರ್ಕ್‌ಷಾಪ್ ಸ್ಥಾಪನೆ ಮಾಡಬೇಕು ಎಂದು ಪ್ರಯತ್ನ ಮಾಡಿ ೭೦ ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದೆ. ಇದು ಸೌತ್ ಇಂಡಿಯಾದಲ್ಲೇ ಇರಬೇಕು ಎಂದು ಯೋಜನೆ ಇದೆ. ಮೈಸೂರು ನಗರದಲ್ಲಿರತಕ್ಕ ವರ್ಕ್‌ಷಾಪ್ ಇಡೀ ಭಾರತದಲ್ಲೇ ಹೆಸರನ್ನು ಪಡೆದಿದೆ. ಎಕ್ಸ್‌ಪ್ರೆಸ್, ಡೀಸಲ್, ರೈಲ್ವೆ ಕಾರಿ ಮಾಡಿ ಕೀರ್ತಿ ಪಡೆದಿದೆ.